O.S **94/2022**

P.W.1

ಸಾಕ್ಷಿಯನ್ನು ದಿಃ 23-06-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ವಿ ಆರ್ ಪಿ 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದ

ನನ್ನ ತಂದೆ ಜೀವಿತಾವಧಿಯಲ್ಲಿ ಜಮೀನುಗಳ ಮೇಲೆ ಒಟ್ಟು ಎಷ್ಟು ಸಾಲ ಮಾಡಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ತಂದೆ ಸಾಯುವ ಕಾಲಕ್ಕೆ ಜಮೀನುಗಳ ಮೇಲೆ ಒಟ್ಟು 8 ಲಕ್ಷ ಸಾಲ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 26.12.2011 ರಂದು KVG Bank Suranagi ಯವರು 1 ನೇ ಪ್ರತಿವಾದಿಯ ಹೆಸರಿಗೆ ಸಾಲ ತೀರಿಸಿದ ಬಗ್ಗೆ ರದ್ದತಿ ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ ಸರ್ವೆ ನಂ. 149/2 ಜಮೀನಿಗೆ ಸಂಬಂಧಪಟ್ಟ ಖರೀದಿ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆಂದು ನಾನು ಪರಿಶೀಲಿಸಿರುವುದಿಲ್ಲ. ನಾನು ಸಹಿಯನ್ನು ಇಂಗ್ಲೀಷನಲ್ಲಿ ಮಾಡುತ್ತೇನೆ. ದಿಃ 04.02.2011 ರಂದು 1 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಲು ನಾನು ಮತ್ತು ನನ್ನ ಸಹೋದರಿಯರು ಸೇರಿ ಮುಕ್ತಿಯಾರ ನಾಮೆಯನ್ನು ಬರೆದುಕೊಟ್ಟಿರುತ್ತೇವೆಂದರೆ ಸರಿಯಲ್ಲ. ನನ್ನ ಅಕ್ಕ ಗಿರಿಜವ್ವ ಕನ್ನಡದಲ್ಲಿ ಸಹಿ ಮಾಡುತ್ತಾರೆ. ಉಳಿದ ಸಹೋದರಿಯರ ಸಹಿ ಗೊತ್ತಿರುವುದಿಲ್ಲ. ಸರ್ವೆ ನಂ. 149/2 ನ್ನು ಕುಟುಂಬದ ಅಡಚಣೆಯನ್ನು ನೀಗಿಸುವ ಸಲುವಾಗಿ ಮಾರಾಟ ಮಾಡಲು ಒಪ್ಪಿ ರುತ್ತೇವೆಂದರೆ ಸರಿಯಲ್ಲ. ಆದ್ದರಿಂದ ಅಂಬೇಡ್ಕರ ನಿಗಮದವರು ಖರೀದಿ ಮಾಡಲು ಒಪ್ಪಿ ರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಎಷ್ಟು ಹಿಸ್ಸೆಗಳು ಆಗಿರುತ್ತವೆ ಎಂದು ನನಗೆ ಮಾಹಿತಿ ಇರುತ್ತಾರೆ. ಯಾರ ಯಾರು ಎಷ್ಟು ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ. 149/2 ರಲ್ಲಿ 2 ಎಕರೆ 15 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ಖರೀದಿಸಿರುತ್ತಾರೆಂದರೆ ಸರಿಯಲ್ಲ. ಸರ್ವೆ ನಂ. 149/2 ರಲ್ಲಿ 2 ಎಕರೆ 16 ಗುಂಟೆ ಜಮೀನನ್ನು 3 ನೇ ಪ್ರತಿವಾದಿ ಖರೀದಿಸಿರುತ್ತಾರೆಂದರೆ ಸರಿಯಲ್ಲ. ಸರ್ವೆ ನಂ. 149/2 ರಲ್ಲಿ 2 ಎಕರೆ 14 ಗುಂಟೆ ಜಮೀನನ್ನು 4 ನೇ ಪ್ರತಿವಾದಿ ಖರೀದಿಸಿರುತ್ತಾರೆಂದರೆ ಸರಿಯಲ್ಲ. ಈ ದಾವೆಯನ್ನು ನಾನು ನನ್ನ ಸಹೋದರನ ಮೇಲೆ ಮಾತ್ರ ಸಲ್ಲಿಸಿರುತ್ತೇನೆ. 2011 ನೇ ಸಾಲಿನಲ್ಲಿ ಖರೀದಿ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಸರ್ಕಾರವನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಖರೀದಿಯಿಂದ ಬಂದ ಹಣವನ್ನು ಒಟ್ಟು ಕುಟುಂಬದ ಏಳಿಗೆಗಾಗಿ ಖರ್ಚು ಮಾಡಿದ್ದರಿಂದ ಅದರ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

sd/-23.06.2026
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಮ್ಮೇಶ್ವರ

ಸಾಕ್ಷಿದಾರರ ಸಹಿಃ sd/-